# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 670

ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 18.08.2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೇಳೆಯ ಬೆಲೆ ಮಾರು ಕಟ್ಟೆಯಲ್ಲಿ ರೂ.120 ಇದ್ದರೂ ಬಿಸಿಯೂಟಕ್ಕೆ ರೂ.72.40 ಕ್ಕೆ ಯಾವ ಬೇಳೆಯನ್ನು ಖರೀದಿಸಲಾಗುತ್ತಿದೆ; ಸದರಿ ಬೇಳೆಯ ಗುಣಮಟ್ಟದ ಕುರಿತು ಸರ್ಕಾರದ ನಿಲುವೇನು; | ಮಧ್ಯಾಹ್ನ ಉಪಹಾರ ಯೋಜನೆಯಡಿ ಮಧ್ಯಾಹ್ನದ ಬಿಸಿಯೂಟವನ್ನು ಸಿದ್ಧಪಡಿಸಲು ಅಗತ್ಯವಿರುವ ತೊಗರಿಬೇಳೆಯನ್ನು ರಾಜ್ಯ ಮಟ್ಟದಲ್ಲಿ ರಾಷ್ಟ್ರೀಯ ಸರಕು ಮತ್ತು ಉತ್ಪನ್ನಗಳ ವಿನಿಮಯ ಲಿಮಿಟೆಡ್ (National Commodity & Derivatives Exchange Limited (NCDEX)) ಮುಖಾಂತರ ಟೆಂಡರ್ ನಡೆಸಿ ರಾಜ್ಯ ಮಟ್ಟದಲ್ಲಿನ ತೊಗರಿಬೇಳೆ ದರ ಅನುಮೋದನಾ ಸಮಿತಿಯ ತೀರ್ಮಾನದಂತೆ ಜಿಲ್ಲಾವಾರು ಎಲ್-1 ಬಿಡ್‌ದಾರರನ್ನು ಆಯ್ಕೆಮಾಡಿ ಎಲ್-1 ಬಿಡ್‌ದಾರರಿಂದ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ತೊಗರಿಬೇಳೆಯನ್ನು ಖರೀದಿಸಲಾಗುತ್ತಿದೆ.<br><br>ಮೂರನೇ ವ್ಯಕ್ತಿ ಗುಣಮಟ್ಟದ ಪರಿಶೀಲಕರಿಂದ ತೊಗರಿಬೇಳೆಯ ಗುಣಮಟ್ಟವನ್ನು ಪ್ರಯೋಗಾಲಯದಲ್ಲಿ ಪರಿಶೀಲಿಸಿ ತೊಗರಿಬೇಳೆಯು ಉತ್ತಮ ಗುಣಮಟ್ಟವನ್ನು ಹೊಂದಿರುವ ಬಗ್ಗೆ ವರದಿಯನ್ನು ಪಡೆದ ನಂತರವೇ ಸರಬರಾಜುಗೊಳಿಸಲಾಗುತ್ತದೆ.<br><br>ಜಿಲ್ಲಾಮಟ್ಟದಲ್ಲಿ ಜಂಟಿ ತಪಾಸಣಾ ಸಮಿತಿಯಿಂದ ತೊಗರಿಬೇಳೆಯ ಗುಣಮಟ್ಟವನ್ನು ಪರಿಶೀಲಿಸಿದ ನಂತರವೇ ಶಾಲೆಗಳಿಗೆ ಸರಬರಾಜುಗೊಳಿಸಲಾಗುತ್ತದೆ. |
| ಆ) | ಸರ್ಕಾರದ ವತಿಯಿಂದ ಟೆಂಡರ್ ಪಡೆದವರು ಸರಬರಾಜು ಮಾಡುತ್ತಿರುವ ಬೇಳೆಯ 50 ಕೆ.ಜಿ.ಬ್ಯಾಗ್‌ನಲ್ಲಿ 20 ಕೆ.ಜಿ.ಯಷ್ಟು ಕಲ್ಲು ಮಣ್ಣುಗಳೇ ತುಂಬಿರುವ ಬಗ್ಗೆ ಸರ್ಕಾರದ ನಿಲುವೇನು; ರಾಜ್ಯದ ಬಡ ಶೋಷಿತ, ದಪಿತ ಹೆಣ್ಣು ಮಕ್ಕಳು ಸೇರಿದಂತೆ ಎಲ್ಲಾ ಮಕ್ಕಳಿಗೆ ಕಳಪೆ ಗುಣಮಟ್ಟದ ಬಿಸಿಯೂಟ ನೀಡುತ್ತಿರುವುದರಿಂದ ಆಗುತ್ತಿರುವ ಪರಿಣಾಮಗಳ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು) | ಈ ರೀತಿಯ ದೂರುಗಳು ರಾಜ್ಯ ಮತ್ತು ಜಿಲ್ಲಾ ಹಂತದಲ್ಲಿ ದಾಖಲಾಗಿರುವುದಿಲ್ಲ. ಮೂರನೇ ವ್ಯಕ್ತಿ ಗುಣಮಟ್ಟಡ ಪರಿಶೀಲಕರಿಂದ ಹಾಗೂ ಜಿಲ್ಲಾಮಟ್ಟದಲ್ಲಿ ಜಂಟಿ ತಪಾಸಣಾ ಸಮಿತಿಯು ತೊಗರಿಬೇಳೆಯ ಗುಣಮಟ್ಟವನ್ನು ಹಾಗೂ ಪ್ರಮಾಣವನ್ನು ಪರಿಶೀಲಿಸಿದ ನಂತರವೇ ಶಾಲೆಗಳಿಗೆ ಸರಬರಾಜು ಆಗುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| ಇ) | ಪತ್ರಿಕಾ ಮಧ್ಯಾಮದಲ್ಲಿ ವರದಿಯಾದಂತೆ ಅತೀ ಕಳಪೆ ಗುಣ ಮಟ್ಟ ಹಾಗೂ ಊಟಕ್ಕೆ ಬಳಸಲು ಸಾಧ್ಯವಾಗದ ಬೇಳೆಯನ್ನು ಬಡ ಮಕ್ಕಳಿಗೆ ಸರ್ಕಾರ ಉಪಹಾರಕ್ಕೆ ನೀಡುತ್ತಿರುವುದು ಎಷ್ಟು ಸರಿ ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ದಾವಣಗೆರೆ ಜಿಲ್ಲೆಯ ತೊಗರಿಬೇಳೆಯ ಗುಣಮಟ್ಟದ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಸುದ್ದಿಯ ಕುರಿತು ತ್ರಿಸದಸ್ಯ ಸಮಿತಿಯಿಂದ ಪರಿಶೀಲನೆ ನಡೆಸಿ ವರದಿ ಪಡೆಯಲಾಗಿದೆ. ಉತ್ತಮಗುಣಮಟ್ಟದ ತೊಗರಿಬೇಳೆ ಸರಬರಾಜಾಗಿರುವ ಬಗ್ಗೆ ಪ್ರಯೋಗಾಲಯದ ಪರೀಕ್ಷೆಗೆ ಒಳಪಡಿಸಿ ವರದಿ ಪಡೆಯಲಾಗಿದೆ. ಗುಣಮಟ್ಟ ಉತ್ತಮವಾಗಿರುವುದನ್ನು ಖಾತ್ರಿಪಡಿಸಿಕೊಳ್ಳಲಾಗಿದೆ. |

**ಇಪಿ 100 ಎಂಎಂಎಸ್ 2025**

**(ಎಸ್.ಮಧು ಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**